ದಿನಾಂಕಃ 07.02.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಹೆಚ್. ವಕೀಲರಿಂದಃ</u>

ನಾನು ವ್ಯವಸಾಯ ಮಾಡುತ್ತೇನೆ. ನನಗೆ 6 ಎಕರೆ 37 ಗುಂಟೆ ತೋಟ ಇದೆ. ಆ ತೋಟದಲ್ಲಿ ಕಾಫೀ, ಕಾಳುಮೆಣಸು ಮತ್ತು ಅಡಿಕೆ ಬೆಳೆ ಬೆಳೆದಿದ್ದೇನೆ. 2022 ರಲ್ಲಿ 40 ಮೂಟೆ ಕಾಫೀ, 2 ಕ್ವಿಂಟಲ್ ಮೆಣಸು ಮತ್ತು 17 ಲಕ್ಷ ಮೌಲ್ಯದ ಅಡಿಕೆ ಬೆಳೆದಿದ್ದೆ. ಆ ವರ್ಷದಲ್ಲಿ ಸುಮಾರು 300-350 ಕ್ವಿಂಟಲ್ ಅಡಿಕೆ ಆಗಿರಬಹುದು. ಅಡಿಕೆಯನ್ನು ಪರಿಚಯದವರಿಗೆ ಮಾತ್ರ ಮಾರಾಟ ಮಾಡುತ್ತೇನೆ. 2021-22 ನೇ ಸಾಲಿನ ಪೂರ ಅಡಿಕೆ ಬೆಳೆಯನ್ನು ಆರೋಪಿಗೆ ಮಾರಾಟ ಮಾಡಿದ್ದೆ. ಈ ಸಂಬಂಧ ಆರೋಪಿಯಿಂದ ರಶೀದಿ ಪಡೆದಿಲ್ಲ ಆದರೆ ಅವರು ನನಗೆ ರೂ.2,00,000/- ಮುಂಗಡ ಹಣ ಕೊಟ್ಟಿದ್ದಾರೆ. ಮುಂಗಡಹಣವನ್ನು ನಗದಾಗಿ ಕೊಟ್ಟಿದ್ದರು. ಈ ಸಂಬಂಧ ದಾಖಲಾತಿ ನನ್ನ ಬಳಿ ಇಲ್ಲ. ಮುಂಗಡ ಹಣ ಕೊಟ್ಟ ದಿನಾಂಕ ನೆನಪಿಲ್ಲ ಆದರೆ 2021 ರ ಅಕ್ಟೋಬರ್ ತಿಂಗಳಲ್ಲಿ ಕೊಟ್ಟಿದ್ದರು. ಮುಂಗಡ ಹಣ ಕೊಡುವ ಸಮಯಕ್ಕೆ ಆರೋಪಿಗೆ ಅಡಿಕೆ ಚೇಣಿ ಕೊಟ್ಟಿದ್ದೆ. ಈ ವಿಚಾರವಾಗಿ ದಾಖಲೆಯನ್ನು ಇಟ್ಟಿಲ್ಲ.

ಆರೋಪಿ ನನಗೆ ಸುಮಾರು 25 ವರ್ಷಗಳಿಂದ ಪರಿಚಯ. ನಾನು ಮತ್ತು ಆರೋಪಿ ಇಂದಿಗೂ ವಿಶ್ವಾಸದಿಂದ ಇದ್ದೇವೆ ಆದರೆ ಅವರು ನನಗೆ ದುಡ್ಡು ಕೊಡುತ್ತಿಲ್ಲ. 2021-22 ನೇ ಸಾಲಿನಲ್ಲಿ ಖರ್ಚನ್ನು ಹೊರತುಪಡಿಸಿ ಸುಮಾರು ರೂ.7,00,000/- ಆದಾಯ ಇತ್ತು. ಆದಾಯ ತೆರಿಗೆ ಪಾವತಿ ಸಂಬಂಧ ದಾಖಲೆಯನ್ನು ಹಾಜರುಪಡಿಲ್ಲ ಆದರೆ ಹಾಜರುಪಡಿಸಬೇಕೆಂದರೆ ಹಾಜರುಪಡಿಸುತ್ತೇನೆ. ಆರೋಪಿಗೆ ಅಡಿಕೆ ಚೇಣಿ ಕೊಟ್ಟ ಬಗ್ಗೆ ಚೆಕ್ ನ್ನು ಹೊರತುಪಡಿಸಿ ಬೇರೆ ದಾಖಲೆ ಪಡೆದಿಲ್ಲ. ರೂ.2,00,000/- ಕೊಟ್ಟ ದಿನದಂದೇ ಆರೋಪಿ ನನಗೆ ಚೆಕ್ ಕೊಟ್ಟಿದ್ದರು. ಈ ವಿಚಾರವನ್ನು ದೂರಿನಲ್ಲಿ ಬರೆಸಿದ್ದೇನೆ. ನನಗೆ ಬ್ಯಾಂಕ್ ವ್ಯವಹಾರಗಳ ಬಗ್ಗೆ ಮಾಹಿತಿ ಇದೆ. 2021 ರ ಅಕ್ಟೋಬರ್ ತಿಂಗಳಲ್ಲಿ ಅಡಿಕೆ ಚೇಣಿ ಕೊಡುವಂತೆ ಆರೋಪಿ ನನ್ನ ಬಳಿ ಬಂದು ಕೇಳಿದ್ದು ದಿನಾಂಕ ನನಗೆ ನೆನಪಿಲ್ಲ. 2021 ರ ನಂತರದಲ್ಲಿ ನಾನು ಆರೋಪಿಯೊಂದಿಗೆ ಅಡಿಕೆ ಚೇಣಿ ವ್ಯವಹಾರ ಮಾಡುತ್ತಿಲ್ಲ. ಇಂದಿಗೂ ಸಹಾ ನಾನು ಆರೋಪಿಯೊಂದಿಗೆ ಅಡಿಕೆ ವ್ಯವಹಾರ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ನನಗೆ ಚೆಕ್ ಕೊಡುವಾಗ ಬೇರೆ ಯಾರು ಇರಲಿಲ್ಲ. ಚೆಕ್ ನಲ್ಲಿನ ವಿವರಗಳನ್ನು ಆರೋಪಿಯು ಮೊದಲೇ ಬರೆದು ತಂದಿದ್ದು ಸಹಿಯನ್ನು ಮಾತ್ರ ನನ್ನ ಸಮಕ್ಷಮ ಹಾಕಿ ಕೊಟ್ಟರು. ಚೆಕ್ ನ್ನು 2022 ರ ಆಗಸ್ಟ್ ತಿಂಗಳಲ್ಲಿ ಬ್ಯಾಂಕಿಗೆ ಸಲ್ಲಿಸಿದ್ದೆ. ಬ್ಯಾಂಕಿನ ಹಿಂಬರಹ ಬಂದ ನಂತರ ಆರೋಪಿಗೆ ವಕೀಲರ ಮೂಲಕ ನೋಟೀಸು ಕಳುಹಿಸಿದ್ದೆ. ಆರೋಪಿ ಕೊಟ್ಟಿದ್ದ ಚೆಕ್ ಅಕೌಂಟ್ ಕ್ಲೋಸ್ಡ್ ಎಂಬ ಕಾರಣಕ್ಕೆ ವಾಪಸ್ಸಾಗಿದೆ. ಆರೋಪಿಗೆ ಕಳುಹಿಸಿದ ನೋಟೀಸು ಅವರಿಗೆ ತಲುಪಿದೆ. ಅಂಚೆ ರಶೀದಿಯನ್ನು ಹಾಜರುಪಡಿಸಿರಬಹುದು. ಆರೋಪಿ ವ್ಯವಸಾಯ ಮಾಡುತ್ತಾರೆ. ನನ್ನ ಹಾಗೂ ಆರೋಪಿಯ ಮನೆಯ ನಡುವೆ 5-6 ಕಿ.ಮೀ ಅಂತರ ಇದೆ. ನಾನು ಆರೋಪಿಯೊಂದಿಗೆ ಇತರೆ ವ್ಯವಹಾರಗಳನ್ನು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.